**ಓ.ಎಸ್. ನಂಃ 386/2023**

**ಡಿ.ಡಬ್ಲ್ಯೂಃ 2**

**ದಿನಾಂಕ 18.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಲ್.ವಿ.ಆರ್.ವಕೀಲರಿಂದಃ**

1. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಹತ್ತನೇಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. 3 ನೇ ಪ್ರತಿವಾದಿ ನನ್ನ ಸಂಬಧಿಕನಲ್ಲ ಆದರೆ ನನ್ನ ಪರಿಚಯಸ್ಥ. ನನ್ನ ಅಣ್ಣನ ಹೆಸರು ಮಾಳೇಗೌಡ ಅಂತ ಇದ್ದು, ನನ್ನ ಅಣ್ಣನಾದ ಮಾಳೇಗೌಡರ ಮಗಳಾದ ಗೀತಾಳನ್ನು ಕಾಮೇನಹಳ್ಳಿಗೆ ವಿವಾಹ ಮಾಡಿ ಕೊಟ್ಟಿರುತ್ತಾರೆ. ನನ್ನ ಅಣ್ಣನಾದ ಮಾಳೇಗೌಡರ ಮಗಳಾದ ಗೀತಾಳನ್ನು 3 ನೇ ಪ್ರತಿವಾದಿಯೊಂದಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

2. ದಾವಾ ಆಸ್ತಿಯು ವಾದಿಯ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ದಾವಾ ಆಸ್ತಿಯ ಸರ್ವೇ ನಂಬರ 246 ಅಂತ ಇರುತ್ತದೆ.

3. ದಾವಾ ಆಸ್ತಿಯು ಕಾರೀಗೌಡರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಕಾರೀಗೌಡರಿಗೆ ಸರ್ಕಾರದಿಂದ ಮಂಜೂರಾದ ಬಗ್ಗೆ ನಾನು ಹಕ್ಕು ಪತ್ರ ಅಥವಾ ಮಂಜೂರಾತಿ ಆದೇಶವನ್ನು ನೋಡಿರುವುದಿಲ್ಲ. ಸರ್ವೇ ನಂಬರ 246/1 ಮತ್ತು 246/2 ರ ಆಸ್ತಿಗಳ ಪಹಣಿಗಳನ್ನು ನಾನು 2002 ರಲ್ಲಿ ನೋಡಿರುವುದಿಲ್ಲ ಆದರೆ ನಿಡಿ.31 ರ ವೀಲುನಾವೆಯನ್ನು ನೋಡಿರುತ್ತೇನೆ. ಸಮಾರು 25 ವರ್ಷಗಳ ಹಿಂದಿನಿಂದಲೂ ನನಗೆ ವಾದಿಯ ತಂದೆಯಾದ ಕಾರೀಗೌಡರ ಪರಿಚಯವಿದೆ. 3 ನೇ ಪ್ರತಿವಾದಿಯು ನನ್ನ ಅಣ್ಣನ ಅಳಿಯ ಎಂದು ಸೂಚಿಸಿದ ಪ್ರಶ್ನೆಗೆ

ಸಾಕ್ಷಿಯು ನಿಡಿ.31 ರ ವೀಲುನಾವೆಯ ಆಗುವ ಕಾಲಕ್ಕೆ 3 ನೇ ಪ್ರತಿವಾದಿಯು ನನ್ನ ಅಣ್ಣನ ಅಳಿಯನಾಗಿರಲಿಲ್ಲ ಎಂದು ನುಡಿದಿರುತ್ತಾರೆ.

4. 3 ನೇ ಪ್ರತಿವಾದಿಗೆ ಜಮೀನು ಇದ್ದರೆ ಮಾತ್ರ ನನ್ನ ಅಣ್ಣನ ಮಗಳಾದ ಗೀತಾಳನ್ನು 3 ನೇ ಪ್ರತಿವಾದಿಗೆ ವಿವಾಹ ಮಾಡಿಕೊಡುವುದಾಗಿ ನನ್ನ ಅಣ್ಣನಾದ ಮಾಳೇಗೌಡರು ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಡಿ.31 ರ ವೀಲುನಾವೆಯ ಆಗುವ ಕಾಲಕ್ಕೆ ನನಗೆ 3 ನೇ ಪ್ರತಿವಾದಿಯ ಪರಿಚಯ ಇರಲಿಲ್ಲ ಎಂದು ಸ್ವತಃ ನುಡಿದಿರುತ್ತಾರೆ.

5. ನಾನು ಮತ್ತು 3 ನೇ ಪ್ರತಿವಾದಿ ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಿಡಿ.31 ರ ವೀಲುನಾಮೆಯನ್ನು ಮಾಡುವ ಪೂರ್ವದಲ್ಲಿ ತಾವು ವೀಲುನಾಮೆ ಮಾಡುತ್ತಿರುವ ಬಗ್ಗೆ ವಾದಿಯ ತಂದೆಯಾದ ಕಾರೀಗೌಡರು 2002 ಇಸವಿಯಲ್ಲಿ ನನ್ನೊಂದಿಗೆ ಪ್ರಸ್ತಾಪಿಸಿದ್ದರು. ದಾವಾ ಆಸ್ತಿಯು ವಾದಿಯ ತಂದೆಯಾದ ಕಾರೀಗೌಡರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

6. ನಿಡಿ.31 ರ ವೀಲುನಾಮೆ ಆದ ದಿನದಂದು ವಾದಿಯ ತಂದೆಯಾದ ಕಾರೀಗೌಡರು ತಾಲ್ಲೂಕು ಕಚೇರಿಗೆ ಬಂದಿದ್ದು, ನಾನು ಸಹ ತಾಲ್ಲೂಕು ಕಚೇರಿಗೆ ಹೋಗಿದ್ದೆ. ನಿಡಿ.31 ರ ವೀಲುನಾಮೆ ಆದ ದಿನದಂದು ಮಧ್ಯಾಹ್ನ 12.30 ಹೊತ್ತಿಗೆ ನಾನು ಮತ್ತು ಕಾರೀಗೌಡರು ಬೇಟಿ ಯಾಗಿದ್ದೇವು. ನಿಡಿ.31 ರ ಛಾಪಾ ಕಾಗದವನ್ನು ಉಪನೊಂದಾಧಿಕಾರಿರವರ ಕಚೇರಿಯಿಂದ ಕಾರೀಗೌಡರು ಖರೀದಿಸಿರುತ್ತಾರೆ.

7. ನಾನು ಕಾರೀಗೌಡರ ವಂಶವೃಕ್ಷವನ್ನು ನೋಡಿರುವುದಿಲ್ಲ. ನನಗೆ ಕಾರೀಗೌಡರ ತಮ್ಮನ ಹೆಸರು ಗೊತ್ತಿಲ್ಲ. ಕಾರೀಗೌಡರ ತಮ್ಮನಾದ ಅಣ್ಣಯ್ಯರವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತನ್ನ ಮಗಳನ್ನು ಈಗಾಗಲೇ ವಿವಾಹ ಮಾಡಿಕೊಟ್ಟ ಕಾರಣ ತಮ್ಮ ಅಂತ್ಯಕ್ರಿಯೇ ನೇರವೇರಿಸಲು ವಾರಸುದಾರರು ಬೇಕಾಗಿರುವ ಕಾರಣ 3 ನೇ ಪ್ರತಿವಾದಿಗೆ ತಾವು ನಿಡಿ.31 ರ ವೀಲುನಾಮೆಯನ್ನು ಬರೆದುಕೊಡುತ್ತಿರುವುದಾಗಿ ಕಾರೀಗೌಡರು ನನ್ನಲ್ಲಿ ಹೇಳಿದ್ದರು.

8. ಕಾರೀಗೌಡರಿಗೆ ಯಾವುದೇ ಸ್ವರ್ಯಾಜಿತ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಗೂ ಸಹ ದಾವಾ ಆಸ್ತಿಯಲ್ಲಿ ಸಮಾನ ಹಕ್ಕು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ್‌ಬಂದಿರುವುದಿಲ್ಲ.

9. ಕಾರೀಗೌಡರ ತಂದೆಯ ಹೆಸರು ಕೆಂಪೇಗೌಡ ಅಂತ ಇರುತ್ತದೆ. ನಿಡಿ.31 ರ ವೀಲುನಾಮೆಯನ್ನು ಬರೆಯುವ ಕಾಲಕ್ಕೆ ಕಾರೀಗೌಡರಿಗೆ ಸುಮಾರು 65 ರಿಂದ 70 ವರ್ಷದ ಮಧ್ಯ ವಯಸ್ಸಾಗಿತ್ತು. ನಿಡಿ.31 ರ ವೀಲುನಾಮೆಯನ್ನು ಬರೆಯುವ ಕಾಲಕ್ಕೆ ಕಾರೀಗೌಡರ ಆರೋಗ್ಯ ಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಡಿ.31 ರ ವೀಲುನಾಮೆಯನ್ನು ಬರೆಯುವಾಗ ಕಾರೀಗೌಡರು ಆರೋಗ್ಯವಂತರಾಗಿದ್ದ ಎಂದು ಸ್ವತಃ ನುಡಿದಿರುತ್ತಾರೆ.

10. ನಿಡಿ.31 ರ ವೀಲುನಾಮೆಯನ್ನು ಬೆರಳಚ್ಚು ಮಾಡಿಸಿರುತ್ತಾರೆ. ನಿಡಿ.31 ರ ವೀಲುನಾಮೆಯನ್ನು ನಾನು ಓದಿದ ನಂತರದಲ್ಲಿಯೇ ನನ್ನ ಸಹಿಯನ್ನು ಹಾಕಿಸಿರುತ್ತೇನೆ. ನಿಡಿ.31 ರ ವೀಲುನಾಮೆಯನ್ನು ಉಪನೊಂದಾಣಿಧಿಕರಿಗಳ ಕಚೇರಿಯಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ಕಾರೀಗೌಡರಿಗೂ ಮತ್ತು 3 ನೇ ಪ್ರತಿವಾದಿಗೂ ಏನೂ ಸಂಬಂದ ಎಂದು ನನಗೆ ಗೊತ್ತಿಲ್ಲ.

11. ದಾವಾ ಆಸ್ತಿಯ ಪಹಣಿಯನ್ನು ನಾನು ನೋಡಿರುತ್ತೇನೆ. ಸರ್ವೇ ನಂಬರ್ 246/2 ರ 5 ಗುಂಟೆ ಜಮೀನಿನ ಪಹಣಿಯಲ್ಲಿ ಕೆ.ಆರ್.ಎಸ್ ಮುಳುಗಡೆ ಎಂದು ನಮೂದಾಗಿತ್ತು ಎಂದರೆ ಸಾಕ್ಷಿಯು ನನಗೆ ಈಗ ನೆನಪಿಗೆ ಬರುತ್ತಿಲ್ಲ ಎಂದು ನುಡಿದಿರುತ್ತಾರೆ. ಅಸ್ತಿತ್ವದಲ್ಲಿ ಇರದ ಆಸ್ತಿಯ ಸಂಬಂಧ ನಿಡಿ.31 ರ ವೀಲುನಾಮೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

12. ನಿಡಿ.31 ರ ವೀಲುನಾಮೆಯನ್ನು ಕಾರೀಗೌಡರು ನನ್ನ ಸಮಕ್ಷಮದಲ್ಲಿ ತಯಾರಿಸಿರುತ್ತಾರೆ.ಸದರಿ ದಿನದಂದು ಮಧ್ಯಾಹ್ನ 12.00 ಗಂಟೆಯ ನಂತರ ನಿಡಿ.31 ರ ವೀಲುನಾಮೆಯನ್ನು ತಯಾರಿಸಿರುತ್ತಾರೆ. ನಿಡಿ.31 ರ ಛಾಪಾ ಕಾಗದವನ್ನು ಯಾವ ದಿನಾಂಕದಂದು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಾರೀಗೌಡರು

ತಮ್ಮ ಸಹಿಯನ್ನು ಬರವಣಿಗೆಯಲ್ಲಿ ಮಾಡುತ್ತಾರೆ. ಕಾರೀಗೌಡರು ಎಷ್ಟು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**